"ಅವರ ಚಹಾಕ್ಕೆ ಸಕ್ಕರೆ ಬದಲಿಗೆ ಉಪ್ಪು ಹಾಕಿದ್ದೇವೆ" ಎಂದಳು ಮೂರನೆಯವಳು.

"ವಯಸ್ಸಾದವರೊಂದಿಗೆ ಹೀಗೆ ನಡೆದುಕೊಳ್ಳುವುದು ತಪ್ಪು" ಎಂದು ಮಕ್ಕಳಿಗೆ ಗದರಿಸಿ ಹೊರ ಬಂದೆ.

"ನೋಡಿ ಚಹಾದಲ್ಲಿ ಏನೋ ವ್ಯತ್ಯಾಸವಾಗಿರುವಂತಿದೆ. ಅದನ್ನು ಬಿಡಿ, ಬೇರೆ ಚಹಾ ಕೊಡುತ್ತಾರೆ" ಎಂದೆ ಸಂಕೋಚದಿಂದ. ಧರಣೇಂದ್ರಯ್ಯ ಯಥಾಪ್ರಕಾರ ಮುಗುಳ್ನಕ್ಕರು.

"ಪರವಾಗಿಲ್ಲ ಬಿಡಿ. ಮಕ್ಕಳೇನೋ ತಮಾಷೆ ಮಾಡಿದ್ದಾರೆ" ಎಂದು ಸ್ವಲ್ಪ ಹೊತ್ತು ಮೌನವಾಗಿದ್ದು, "ಶಿವಮೊಗ್ಗೆಯಲ್ಲಿರುವ ಬಂಧುವೊಬ್ಬರ ಮನೆಯಲ್ಲಿ ಉಳಿದುಕೊಂಡಾಗ ನನ್ನನ್ನು ಒಬ್ಬ ಭಿಕ್ಷುಕನಂತೆ ನೋಡಿದರು. ಮಲಗಲು ನನಗೆ ಮನೆಯ ಹೊರಗಿನ ಜಗುಲಿಯ ಮೇಲೆ ಚಾಪೆ ಹಾಸಿಕೊಟ್ಟಿದ್ದರು. ಕೊರೆವ ಚಳಿ. ರಾತ್ರಿಯೆಲ್ಲಾ ನಿದ್ದೆ ಬಾರದೆ ಹೊರಳಾಡಿ ಹೊರಳಾಡಿ ಬೆಳಗಿನ ಜಾವ ನಿದ್ದೆಗೆ ಜಾರಿದ್ದೆ. ಎಚ್ಚರವಾದಾಗ ಒಂಬತ್ತು ಗಂಟೆ! ಒಳಗೆ ಹೋಗೋಣವೆಂದು ಎದ್ದರೆ ಬಾಗಿಲಿಗೆ ಬೀಗ! ನನ್ನ ಬ್ಯಾಗು, ಬಟ್ಟೆ, ಬರೆ ಎಲ್ಲಾ ತಂದು ಬಾಗಿಲಿನ ಮುಂದೆ ಇಟ್ಟಿದ್ದರು. ಅಲ್ಲಿಂದ ಹೊರಬಿದ್ದೆ. ದಾವಣಗೆರೆಯ ಸೋದರ ಸಂಬಂಧಿ ಮನೆಯಲ್ಲಿ ನೀರಿಗೆ ಖಾರದ ಪುಡಿ ಬೆರೆಸಿ ಸಾರು ಅಂತ ಅರೆಬೆಂದಿದ್ದ ಅನ್ನದ ಜೊತೆ ನೀಡಿದ್ದರು. ಎರಡೇ ದಿವಸಕ್ಕೆ ಆ ಮನೆಯಿಂದ ಹೊರಬಂದೆ" ಎಂದರು.

ಅಂದು ರಾತ್ರಿ ಜ್ಯೋತಿ, ರಶ್ಮಿ, ಸ್ವಾತಿ, ವಿನಯ ಎಲ್ಲರನ್ನೂ ಕೂರಿಸಿಕೊಂಡು ಮತ್ತೊಮ್ಮೆ ಇಂಥ ಘಟನೆ ನಡೆಯಬಾರದೆಂದು ಎಚ್ಚರಿಸಿದೆ.

ಈ ಮುದುಕನ ಬಗ್ಗೆ ಅಯ್ಯೋ ಎನಿಸಿತು. ಇಳಿ ವಯಸ್ಸಿನಲ್ಲಿ ಈ ಎಲ್ಲಾ ಅವಮಾನಗಳನ್ನು ಸಹಿಸಿಕೊಂಡಿರಬೇಕಾದ ಅವಶ್ಯಕತೆಯಾದರೂ ಏನಿದೆ? ಧರಣೇಂದ್ರಯ್ಯ ಇನ್ನೆಷ್ಟು ದಿವಸ ನಮ್ಮ ಮನೆಯಲ್ಲಿ ಇರುತ್ತಾರೆ ಎಂಬ ವಿಷಯ ನಮ್ಮ ಕುಟುಂಬದಲ್ಲಿ ಬಿಸಿಬಿಸಿಯಾಗಿ ಚರ್ಚೆಯಾಗತೊಡಗಿತು. ನಮ್ಮಮ್ಮ ಮೊದಲೇ ಧರಣೇಂದ್ರಯ್ಯನವರ ಬಗ್ಗೆ ಇಲ್ಲಸಲ್ಲದ ಕಥೆಗಳನ್ನು ಹೇಳಿ ಮನೆಯವರಲ್ಲಿ ಆತನ ಬಗ್ಗೆ ಕೆಟ್ಟ ಅಭಿಪ್ರಾಯ ತುಂಬಿಸಿಬಿಟ್ಟಿದ್ದರು. ಮಕ್ಕಳಿಗಂತೂ ಆ ಮುದುಕ ಖಳನಾಯಕನಂತೆ ಕಾಣುತ್ತಿದ್ದು ಅವರನ್ನು ಮನೆಯಿಂದ ಓಡಿಸುವ ತಂತ್ರಗಾರಿಕೆಯಲ್ಲಿ ಥರಾವರಿ ಶೋಧನೆ ಮಾಡುತ್ತಾ ನಾನಾ ಪ್ರಯೋಗಗಳನ್ನು ಮಾಡಿ ಸಕಲ ಪ್ರಯತ್ನಗಳಲ್ಲೂ ವಿಫಲರಾಗುತ್ತಾ ಹೊಸ ಹೊಸ ಉಪಾಯಗಳನ್ನು ಹುಡುಕುತ್ತಾ, ಓದಬೇಕಾದ ಸಮಯವನ್ನೆಲ್ಲಾ ವ್ಯರ್ಥವಾಗಿ ಕಳೆಯುತ್ತಾ ನನ್ನಿಂದ ಬೈಸಿಕೊಳ್ಳುತ್ತಿದ್ದರು.

ನಾನು ಕೆಲಸಕ್ಕೆ ಹೊರಟು ನಿಂತಾಗ ಧರಣೇಂದ್ರಯ್ಯನವರು ನನ್ನ ಹಿಂದೆಯೇ ಬಂದರು. ಅವರ ಕೈಯಲ್ಲಿ ದಾಖಲೆ ಪತ್ರಗಳ ಫೈಲೊಂದಿತ್ತು.

"ಸಮೀಪದಲ್ಲಿ ಎಲ್ಲಿಯಾದರೂ ಆಟೋರಿಕ್ಷಾ ಸಿಗುವ ಕಡೆ ಬಿಟ್ಟು ಬಿಡಿ. ಸ್ವಲ್ಪ ಕೆಲಸವಿದೆ ಮುಗಿಸಿಕೊಂಡು ಬರುತ್ತೇನೆ" ಎಂದರು.

ಅವರ ಎಲ್ಲಾ ವ್ಯವಹಾರಗಳಿರುವುದು ಮುಂಬೈಯಲ್ಲಿ. ಬೆಂಗಳೂರಿನಲ್ಲಿ ಎಂತಹ ಕೆಲಸ? ಘಾಟಿ ಮುದುಕ ಬೆಂಗಳೂರಿನಲ್ಲೂ ಹೋಟೆಲ್ ಬಿಸನೆಸ್ ಆರಂಭಿಸುತ್ತಿರಬೇಕು. ಬಹುಶಃ ವ್ಯವಹಾರ ಕೊನೆಯ ಹಂತದ ಮಾತುಕತೆ ಅಥವಾ ಒಪ್ಪಂದಕ್ಕೆ ತಲುಪಿರಬೇಕು. ಹಾಗಾದರೆ ಸಂಜೆಗೋ, ನಾಳೆಯೋ ಇವರು ಮುಂಬೈಗೆ ಹೊರಟುಬಿಡಬಹುದು. ಹಾಗೆ ಯೋಚಿಸುತ್ತಲೇ ಮನಸ್ಸಿಗೆ ಸ್ವಲ್ಪ ನಿರಾಳ ಎನಿಸಿತು. ಎಂಥ ಚಾಣಾಕ್ಷ ಈ ಮುದುಕ! ಮನೆಗೆ ಬಂದು ನಾಲ್ಕು ದಿನಗಳಾದರೂ ತನ್ನ ಕೆಲಸ ಮುಗಿಯುವವರೆಗೂ ಒಂದು ಸಣ್ಣ ಸುಳಿವನ್ನೂ ನೀಡಲಿಲ್ಲ.